# ‘ವಿಶ್ವ’ ಕನ್ನಡ ಆಗುವುದೇ?

ನಾಡಿನ ನುಡಿಯಾದ ಕನ್ನಡ ಭಾಷೆಯ ಕಲಿಕೆ, ಬಳಕೆ ಮತ್ತು ಉಳಿಕೆಯ ಪ್ರಶ್ನೆ ಚರ್ಚೆಗೆ ಬರುತ್ತದೆ. ಕನ್ನಡದ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಶ್ನೆ ಎಲ್ಲ ಸಾಮಾಜಿಕ ಮತ್ತು ಸಾಂಸ್ಕೃತಿಕ ವೇದಿಕೆಗಳಲ್ಲಿ ಪ್ರಸ್ತಾಪಕ್ಕೆ ಬರುತ್ತದೆ. ಅಖಿಲ ಭಾರತ ವ್ಯಾಪ್ತಿಯ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಷೆ- ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಚಿಂತನೆಯೂ ಆದ್ಯತೆ ಪಡೆದುಕೊಳ್ಳುತ್ತದೆ. ನಾಡಿನ ಜನಪದರ ಬದುಕಿನೊಂದಿಗೆ ಅವಿನಾಭಾವ ಹೊಂದಿರುವ ನುಡಿ, ಬದುಕಿಗಾಗಿ ನಡೆಸುವ ಹೋರಾಟದಲ್ಲಿ ಅಪ್ರಸ್ತುತವಾಗುತ್ತಿದೆಯೇ ಎಂಬ ಆತಂಕ ಭಾಷೆಯ ಉಳಿವಿನ ಬಗ್ಗೆ ಆಸಕ್ತಿ ತಾಳಿದವರಲ್ಲಿ ಮೂಡುತ್ತಿದೆ.

ಈಚೆಗಷ್ಟೆ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡಿಗರಲ್ಲಿ ಸ್ವಲ್ಪ ಮಟ್ಟಿನ ಜಾಗೃತಿಯ ಭಾವವನ್ನು ಮೂಡಿಸಿದೆಯಾದರೂ ಕನ್ನಡ ಭಾಷೆ ಎದುರಿಸುತ್ತಿರುವ ಮೂಲ ಸಮಸ್ಯೆಗಳ ಕುರಿತಾಗಿ ಗಮನಾರ್ಹವಾದ ಚಿಂತನೆಯೇನೂ ಆ ಸಮ್ಮೇಳನದಿಂದ ಹೊರಬಂದಿಲ್ಲ. ಭಾಷೆಯ ಬಳಕೆಗೆ ಸಂಬಂಧಿಸಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪರಿಸ್ಥಿತಿಯಲ್ಲಿ ವ್ಯತ್ಯಾಸಗಳನ್ನು ಹುಡುಕುವುದರಿಂದ ಪ್ರಯೋಜನವಿಲ್ಲ. ಭಾಷೆಯ ಕುರಿತ ಜಿಜ್ಞಾಸೆಗಿಂತ ಬದುಕು ಮುಖ್ಯ ಎಂಬುದು ಎಲ್ಲ ಕಾಲದ ಚಿಂತನೆ. ಜನರ ಜೀವನ ಮಟ್ಟದಲ್ಲಿ ಸುಧಾರಣೆಗಳಾದರೆ ಭಾಷೆ, ಅದನ್ನು ಅಧರಿಸಿದ ಸಾಹಿತ್ಯ, ಸಂಸ್ಕೃತಿ ಮೊದಲಾದವು ಉನ್ನತ ಮಟ್ಟದಲ್ಲಿ ರೂಪುಗೊಳ್ಳುತ್ತವೆ. ಆದ್ದರಿಂದ ಸಾಹಿತ್ಯ- ಸಂಸ್ಕೃತಿ ಕುರಿತ ಯಾವುದೇ ಸಮಾವೇಶವಾಗಲೀ ಜನರ ಜೀವನ ಸುಧಾರಣೆಯ ಮೂಲ ಅಂಶವನ್ನು ಬಿಟ್ಟು ಏನೇ ಚಿಂತನೆ ನಡೆಸಿದರೂ ಅದು ಬಹುಸಂಖ್ಯೆಯಲ್ಲಿರುವ ಜನಸಾಮಾನ್ಯರ ಬದುಕಿನ ದೃಷ್ಟಿಯಿಂದ ಅಪ್ರಸ್ತುತವಾಗುತ್ತದೆ. ಆಗ ಇಂಥ ಸಮಾವೇಶಗಳಿಗೆ ವೆಚ್ಚವಾಗುವ ಹಣ ಜನ ಸಾಮಾನ್ಯರದ್ದಾದರೆ ಅದಕ್ಕೆ ದುರ್ಬಳಕೆಯ ಆರೋಪ ತಟ್ಟುತ್ತದೆ.

ಕರ್ನಾಟಕದ ಮಟ್ಟಿಗೆ ಕಲಿಕೆಯನ್ನು ಅವಲಂಬಿಸಿ ತಿಂಗಳ ಸಂಪಾದನೆಯನ್ನು ಖಚಿತ ಪಡಿಸಿಕೊಳ್ಳುವ ಉದ್ಯೋಗದ ಕ್ಷೇತ್ರಕ್ಕೆ, ಮಾರುಕಟ್ಟೆಯ ಸ್ವರೂಪ ಬಂದು ಬಹಳ ಕಾಲವಾಗಿದೆ. ಇಂಗ್ಲಿಷರ ಆಳ್ವಿಕೆಯಿಂದ ಭಾರತೀಯ ಜನಸಮುದಾಯದಲ್ಲಿ ಉಂಟಾದ ಪುನರುಜ್ಜೀವನದ ಕಾಲದಿಂದಲೂ ಓದಿಗೂ ಖಚಿತ ಆದಾಯದ ಉದ್ಯೋಗ ಗಳಿಕೆಗೂ ಸಂಬಂಧ ಏರ್ಪಟ್ಟಿದೆ. ಉದ್ಯೋಗದ ಅವಕಾಶ ಬದುಕಿನ ಹಾದಿಯನ್ನು ನಿರ್ಧರಿಸುತ್ತಿದೆಯಾದ್ದರಿಂದ ಅದನ್ನು ಪಡೆಯುವ ಅರ್ಹತೆ ಗಳಿಸುವುದು ಮುಖ್ಯವಾಗುತ್ತದೆ. ಸಂಪರ್ಕ ಕ್ಷೇತ್ರದಲ್ಲಿ ಆಗಿರುವ ವ್ಯಾಪಕ ಸುಧಾರಣೆಗಳ ಕಾರಣ ಹುಟ್ಟೂರಿನಲ್ಲಿಯೇ ಬದುಕಿನ ದಾರಿಯನ್ನು ಹುಡುಕಿಕೊಳ್ಳಬೇಕೆಂದಿಲ್ಲ. ರಾಜ್ಯದಲ್ಲಿ ಮಾತ್ರವಲ್ಲದೆ, ಹೊರರಾಜ್ಯಗಳಲ್ಲಿ, ಅಷ್ಟೇ ಏಕೆ ಹೊರದೇಶಗಳಲ್ಲಿ ಉದ್ಯೋಗ ಪಡೆಯುವುದಕ್ಕೆ ಈಗ ಸಾಧ್ಯವಿದೆ. ಅಂಥ ಔದ್ಯೋಗಿಕ ಬದಲಾವಣೆ ಈಗಾಗಲೇ ಆಗಿದೆ. ಇದಕ್ಕೆ ಅರ್ಹತೆ ಗಳಿಸಲು ನಿರ್ದಿಷ್ಟ ವಿಷಯಗಳಲ್ಲಿ ಹೆಚ್ಚಿನ ಪರಿಣತಿ ಹೊಂದಬೇಕು. ಆದರೆ ಸಂವಹನಕ್ಕೆ ಬಳಕೆಯಾಗುವ ಮಾಧ್ಯಮ ಹೊರ ಪರಿಸರದಲ್ಲಿಯೂ ಮಾನ್ಯವಾಗಬೇಕು ಎಂಬ ಕಾರಣದಿಂದ, ಹುಟ್ಟಿನಿಂದ ಬಂದ ಪರಿಸರದ ನುಡಿಯನ್ನು ಬಿಟ್ಟು ಎಲ್ಲೆಡೆಗೆ ಸಲ್ಲುವ ಮಾಧ್ಯಮವೆಂದು ಇಂಗ್ಲಿಷನ್ನು ಕಲಿಕೆಯಲ್ಲಿ ಅವಲಂಬಿಸುವುದು ಅನಿವಾರ್ಯ ಎಂಬ ಸನ್ನಿವೇಶ ನಿರ್ಮಾಣವಾಗಿದೆ. ಈ ಬೆಳವಣಿಗೆ ವಡ್ಡಾರಾಧನೆಯ ಶಿವಕೋಟ್ಯಾಚಾರ್ಯ ಹೇಳುವಂತೆ ನಾಡಿನ ‘ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ’ಗಳಲ್ಲಿ ಕೂಡ ವಿಪರೀತ ಹಂತಕ್ಕೆ ಹೋಗಿದೆ.

ಇದರ ಪರಿಣಾಮ ನಾಡಿನ ನುಡಿಯಾದ ಕನ್ನಡ ಭಾಷೆಯ ಕಲಿಕೆ, ಬಳಕೆ ಮತ್ತು ಉಳಿಕೆಯ ಪ್ರಶ್ನೆ ಚರ್ಚೆಗೆ ಬರುತ್ತದೆ. ಕನ್ನಡದ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಶ್ನೆ ಎಲ್ಲ ಸಾಮಾಜಿಕ ಮತ್ತು ಸಾಂಸ್ಕೃತಿಕ ವೇದಿಕೆಗಳಲ್ಲಿ ಪ್ರಸ್ತಾಪಕ್ಕೆ ಬರುತ್ತದೆ. ಅಖಿಲ ಭಾರತ ವ್ಯಾಪ್ತಿಯ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಷೆ- ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಚಿಂತನೆಯೂ ಆದ್ಯತೆ ಪಡೆದುಕೊಳ್ಳುತ್ತದೆ. ನಾಡಿನ ಜನಪದರ ಬದುಕಿನೊಂದಿಗೆ ಅವಿನಾಭಾವ ಹೊಂದಿರುವ ನುಡಿ, ಬದುಕಿಗಾಗಿ ನಡೆಸುವ ಹೋರಾಟದಲ್ಲಿ ಅಪ್ರಸ್ತುತವಾಗುತ್ತಿದೆಯೇ ಎಂಬ ಆತಂಕ ಭಾಷೆಯ ಉಳಿವಿನ ಬಗ್ಗೆ ಆಸಕ್ತಿ ತಾಳಿದವರಲ್ಲಿ ಮೂಡುತ್ತಿದೆ. ಆದ್ದರಿಂದಲೇ ಜನ ಸೇರುವ ಕಡೆಗಳಲ್ಲಿ ಪ್ರಭುತ್ವ ಕೂಡ ಈ ಬಗ್ಗೆ ಚಿಂತನೆ ನಡೆಸುವುದು ಅವಶ್ಯಕವಾಗುತ್ತದೆ.

ಈ ಚಿಂತನೆಗೆ ಸರ್ಕಾರ ನಡೆಸುತ್ತಿರುವ ವಿಶ್ವಕನ್ನಡ ಸಮ್ಮೇಳನದಂತಹ ವಿಶಾಲ ವೇದಿಕೆಗಳು ಕೂಡ ಆಸ್ಪದ ನೀಡಬೇಕಿದೆ. ನಾಡವರಲ್ಲಿ ತಮ್ಮ ಪರಂಪರೆಯ ಬೇರುಗಳನ್ನೂ ಹಿಂದಣ ಸಾಧನೆಗಳ ಅರಿವನ್ನೂ ಮೂಡಿಸುವುದರ ಜೊತೆಗೆ ಜನಪದರ ಬದುಕು ವರ್ತಮಾನದ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬ ರಚನಾತ್ಮಕ ಮಾರ್ಗಗಳನ್ನೂ ಹುಡುಕುವುದಕ್ಕೆ ಯತ್ನಿಸಬೇಕು. ಜನಪದರ ಲೌಕಿಕ ಬದುಕು ಸ್ವಾವಲಂಬಿಯಾಗದೆ ಸಾಂಸ್ಕೃತಿಕ ಬದುಕಿನಲ್ಲಿ ಬದಲಾವಣೆಗಳನ್ನು ನಿರೀಕ್ಷಿಸಲಾಗದು. ಆದ್ದರಿಂದ ನೈಸರ್ಗಿಕ ವೈಪರೀತ್ಯಗಳಿಗೆ ಆಗಾಗ ಸಿಲುಕಿ ಹೊತ್ತಿನ ತುತ್ತಿಗೆ ನಿತ್ಯ ಹೋರಾಟ ನಡೆಸುವವರೇ ಬಹುಸಂಖ್ಯೆಯಲ್ಲಿರುವ ಕನ್ನಡ ನಾಡವರಿಗೆ ವಿಶ್ವ ಕನ್ನಡ ಸಮ್ಮೇಳನದಂಥ ಸಂದರ್ಭಗಳು ಬದುಕಿನಲ್ಲಿ ಭರವಸೆಯ ಬೆಳಕನ್ನು ಮೂಡಿಸುವ ಯತ್ನ ಮಾಡಬೇಕಿರುವುದು ಅವಶ್ಯಕ.

■ ಲಕ್ಷ್ಮಣ ಕೊಡಸೆ

